ಅಭಿಪ್ರಾಯವನ್ನು ಒಪ್ಪಿಕೊಂಡು ಹೋದರೆ ಯಾವುದೇ ಕಂಪ್ಲೆಂಟ್ ಇಲ್ಲದೇ ಇದ್ದರೆ ಮಾಡಬಹುದು ಎನ್ನುವ ತೀರ್ಮಾನವನ್ನು ನಾವು ಮಾಡಬೇಕಾಗುತ್ತದೆ. There I agree with your suggestion.

ಈಗ ನಮ್ಮಲ್ಲಿ ಇರತಕ್ಕ ರೂಲ್ಸ್ ಪ್ರಕಾರ ಅವರು ಏನೇನು ಡಿಕ್ಲೇರ್ ಮಾಡಬೇಕೋ ಅದನ್ನು ಡಿಕ್ಲೇರ್ ಮಾಡಿರತಕ್ಕ ವಿಚಾರದಲ್ಲಿ ಅದು ಸರಿಯಲ್ಲ ಎಂದು ಕಂಡುಬಂದರೆ ಆ ಬಗ್ಗೆ ಕಾರ್ಯ ತೆಗೆದುಕೊಳ್ಳುವುದು ಒಂದು. ಮತ್ತೊಂದು ಅವರು ಎಷ್ಟು ನಿಜ ಕೊಟ್ಟಿದ್ದಾರೆಯೇ ಅಥವಾ ಸುಳ್ಳು ಕೊಟ್ಟಿದ್ದಾರೆಂದು ನೋಡುವುದಕ್ಕೂ ಕೂಡ ಈಗಿರತಕ್ಕ ಕಾನೂನಿನಲ್ಲಿ ಅಡಕವಾಗಿದೆ. ಅದರ ಪ್ರಕಾರ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆ

ಅಜ್ಜಂಪುರ ಸರ್ಕಾರದ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಕಟ್ಟಿಸುವ ಬಗ್ಗೆ

2818 - ಡಾ. ಹೆಚ್.ಆರ್. ರಾಜು (ತರೀಕೆರೆ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ಅಜ್ಜಂಪುರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ ಇದನ್ನು ಆಯವ್ಯಯದಲ್ಲಿ ಸೇರಿಸದೆ ಬಿಡಲಾಗಿದೆ?

ಇ) ಇಲ್ಲಿನ ಮಧ್ಯಂತರ ಮಂಡಲ್ ಪಂಚಾಯಿತಿಯವರು ಕಾಲೇಜಿನ ಕಟ್ಟಡಕ್ಕಾಗಿ ನಿವೇಶನ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡಕ್ಕಾಗಿ 1991-92ನೇ ಸಾಲಿನ ಯೋಜನೆಯಡಿ ಒದಗಿಸಿದ ಹಣ ರೂ 150.00 ಲಕ್ಷಗಳು ಮಾತ್ರ ಆ 64 ಸರ್ಕಾರಿ ಕಾಲೇಜುಗಳಿಗೆ ಸ್ವಂತ ಕಟ್ಟಡ ಒದಗಿಸುವ ಅವಶ್ಯಕತೆ ಇದೆ. ಆದುದರಿಂದ ನಿರ್ಮಾಣ ಕಾರ್ಯವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು. 1991-92ನೇ ಸಾಲಿನಲ್ಲಿ 12 ಹೊಸ ಕಾಮಗಾರಿಗಳನ್ನು ಮಾತ್ರ ಪರಿಗಣಿಸಲು ಸಾಧ್ಯವಾಯಿತು.

ಆದಾಗ್ಯೂ ಈ ಕಾರ್ಯವನ್ನು 1992-93ನೇ ಸಾಲಿನಲ್ಲಿ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಪರಿಶೀಲಿಸಲಾಗುವುದು.

ಇ) ಕಾಲೇಜಿನ ಕಟ್ಟಡಕ್ಕಾಗಿ ಮಧ್ಯಂತರ ಮಂಡಲ ಪಂಚಾಯಿತಿಯಿಂದ 2.5 ಎಕರೆ ಜಮೀನನ್ನು ನೀಡಲಾಗಿದೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರವೇಳೆ ಮುಗಿಯಿತು. ಈಗ ಚುಕ್ಕೆಗುರುತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುವುದು.